# K'taka NEET notification is invalid: SC

The Supreme Court on Wednesday held as "invalid" a condition in the notification for NEET-PG, 2018, issued by the Karnataka government which imposed a condition of domicile on candidates for admission to post-graduate medical or dental courses seats in the state. Referring to its 2014 verdict, a bench of Justices Arun Mishra and UU Lalit directed the Karnataka government, the directorate of medical education and the Karnataka Examinations Authority to modify and amend the notification and republish the calendar of events.

FULL REPORT: PAGE 7

THE TIMES OF INDIA

## Mys varsity slips to 126th spot

**Mysuru:** The University of Mysore has slipped in the National Institutional Ranking Framework (NIRF) announced by the Union ministry of human resource development on Tuesday.

In 2017, the UoM ranked 36th (University category) among 774 varisities across the country and it was the only conventional public university from Karnataka to figure in the NIRF. But this year, it has come down to 126th position. The decline in the ranking is attributed to the vacancies at the varsity.

D Bharathi, registrar, said: "If the vacant teaching posts were filled by the government, we would have been placed much better. The fall in ranking is mainly due to more than 50% shortage of permanent faculty." TNN

# SC scraps K'taka domicile clause in NEET notification

Kevin.Mendonsa
@timesgroup.com

**Mangaluru:** In a big relief to students from outside Karnataka who have studied MBBS or BDS here, the Supreme Court on Wednesday quashed a notification issued by the state government making a minimum 10-year study in Karnataka mandatory to qualify for government seats in post-graduate medical courses.

Last week, the court had granted a stay in the case. On Wednesday, the court asked the state to strike down the Karnataka-origin criterion and issue a fresh notification for NEET-PG admissions. With this, candidates from outside Karnataka, who have completed their undergraduate courses in Karnataka and are seeking state quota PG seats in medical or dental colleges, are eligible for seats as per NEET rankings. "We've convened a meeting of stakeholders on Thursday, and will soon issue a fresh notification," said Dr Sachidanand, director of medical education department.

### PG MEDICAL COURSES

"Quoting the 2014 Vishal Goyal verdict, the court observed that Karnataka's notification violates Article 14. It said candidates studying in the state are eligible for PG seats," said Amit Kumar, an advocate in the apex court.

The court directed the state government, the directorate of medical education and the Karnataka Examinations Authority to amend the PGET-2018 bulletin and republish the calendar of events. A total of 44 MBBS and BDS doctors from Karnataka who have cleared the NEET-PG 2018 had sought withdrawal of the domicile clause, terming it invalid and unconstitutional.

The government argued that it enjoyed the right to formulate eligibility conditions to give preference to candidates who are most likely to serve the state.

***(Additional inputs from agencies)***

# SC invalidates domicile rule for PG medical seats

## State has to re-publish calendar of events

KRISHNADAS RAJAGOPAL
NEW DELHI

The Supreme Court on Wednesday declared invalid a Karnataka government condition restricting postgraduate admissions for medical and dental government quota seats to students with minimum 10 years domicile in the State.

### 'Modify info bulletin'

In a judgment by a Bench of Justices Arun Mishra and U.U. Lalit, the SC directed Karnataka to amend and modify the information bulletin jointly issued by the State Directorate of Medical Education and Karnataka Examinations Authority on March 10.

The court ordered the State to re-publish the calendar of events in terms of the judgment and complete the entire process within the timeline stipulated by the regulatory authorities.

### Plea by 44 doctors

The judgment was based on a petition filed by 44 doctors, who did their MBBS/BDS courses from Karnataka and have cleared the National Eligibility-cum-Entrance Test for Post Graduation (NEET-PG) 2018 with high merit and are aspiring for admission to PG courses in the State.

The court said the domicile condition of 10 years bars even students who completed their MBBS and BDS from colleges in Karnataka to compete for government quota seats.

CONTINUED ON ▸ PAGE 8

# SC invalidates domicile rule for PG medical quota seats

CONTINUED FROM PAGE 1

"We hold Clause 4.1 of the Information Bulletin (PGET-2018) to be invalid to the extent it disqualifies petitioners and similarly situated candidates who completed their MBBS/BDS degree courses from colleges situated in Karnataka from competing for admission to postgraduate medical/dental courses in government medical colleges and against government quota seats in non-governmental institutions," Justice Lalit, who wrote the verdict, held.

**State's argument**

Karnataka government argued that the as per the eligibility conditions, only candidates of Karnataka origin could compete for admission to 50% government seats in government colleges and against government quota seats in private colleges. It submitted that these conditions were "stipulated inorder to ensure that the State's requirement of skilled human resource is met with". The State reasoned that the Post-Graduate Medical Education Regulation, 2000, of the Medical Council of India (MCI) does not prohibit the State from stipulating eligibility conditions for PG courses.

The MCI, however, referred to past judgments of the Supreme Court to argue that the "preference based on domicile was violative of the principle of equality".

# ಕನ್ನಡಿಗರಿಗೆ ವೈದ್ಯ ಪಿಜಿ ನಷ್ಟ

**• ಕನ್ನಡಪ್ರಭ ವಾರ್ತೆ** ನವದೆಹಲಿ

ಕರ್ನಾಟಕದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಸ್ನಾತಕೋತ್ತರ ಪದವಿಗೆ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆಯಲು ರಾಜ್ಯದಲ್ಲಿ 10 ವರ್ಷ ಅಧ್ಯಯನ ನಡೆಸಿರಬೇಕು ಎಂದು ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಇದರೊಂದಿಗೆ ಕನ್ನಡಿಗರಿಗೆ ವೈದ್ಯ ಪಿಜಿ ಕೋಟಾ ಖೋತಾ ಆಗುವ ಸಾಧ್ಯತೆ ದಟ್ಟವಾಗಿದೆ.

- ರಾಜ್ಯದಲ್ಲಿ 10 ವರ್ಷ ಅಧ್ಯಯನ ಕಡ್ಡಾಯ ನಿಯಮ ರದ್ದು
- ಸುಪ್ರೀಂಕೋರ್ಟ್‌ನಿಂದ ಮಹತ್ವದ ಆದೇಶ ಜಾರಿ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ಬಗ್ಗೆ ಹೊರಡಿಸಿದ್ದ ಅಧಿಸೂಚನೆಗೆ ತಿದ್ದುಪಡಿ ಮಾಡಿ ಹೊಸದಾಗಿ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ನ್ಯಾ. ಅರುಣ್ ಮಿಶ್ರಾ ಮತ್ತು ನ್ಯಾ.ಯು.ಯು.ಲಲಿತ್ ಅವರನ್ನು ಒಳಗೊಂಡ ನ್ಯಾಯಪೀಠ ಆದೇಶಿಸಿದೆ.

↘ 10

SDUAHER

## ಕೋಲಾರ ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಸಮಾವೇಶ ಆಯೋಜನೆ

# ನಾಳೆ 'ವಿಕಿರಣ ಭೌತಶಾಸ್ತ್ರ' ರಾಷ್ಟ್ರೀಯ ಸಮಾವೇಶ

• **ಕನ್ನಡಪ್ರಭ ವಾರ್ತೆ** ಕೋಲಾರ

ನಗರದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ರಜತ ಮಹೋತ್ಸವ ಆಡಿಟೋರಿಯಂನಲ್ಲಿ ಏ. 6ರಂದು ಬೆಳಗ್ಗೆ 9 ಗಂಟೆಗೆ 'ವಿಕಿರಣ ಭೌತಶಾಸ್ತ್ರ' ರಾಷ್ಟ್ರೀಯ ಸಮಾವೇಶವನ್ನು ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ನಿರ್ದೇಶಕ ಕೆ.ಜೆ. ರಾವ್ ಉದ್ಘಾಟಿಸುವರು.

ಸಮಾವೇಶದ ಕುರಿತು ಮಾಹಿತಿ ನೀಡಿರುವ ಸಮಾವೇಶದ ಸಂಚಾಲಕ ಡಾ.ಎಚ್.ಸಿ. ಮಂಜುನಾಥ್ ಹಾಗೂ ಸಹ ಸಂಚಾಲಕ ಪ್ರೊ.ಎಲ್. ಸೀನಪ್ಪ, ಜಿಲ್ಲೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಇಂತಹ ರಾಷ್ಟ್ರೀಯ ಸಮಾವೇಶವನ್ನು ನಗರದ ಸರ್ಕಾರಿ ಮಹಿಳಾ ಕಾಲೇಜು ಭೌತಶಾಸ್ತ್ರ ವಿಭಾಗ, ರಾಷ್ಟ್ರೀಯ ವಿಜ್ಞಾನ ಅಕಾಡೆಮಿ, ದೇವರಾಜ ಅರಸು ವೈದ್ಯಕೀಯ ವಿವಿ, ಬೆಂಗಳೂರು ಉತ್ತರ ವಿವಿ ಐಎನ್‌ಎಸ್‌ಎಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

**250 ಮಂದಿ ವಿಜ್ಞಾನಿಗಳು ಭಾಗಿ:** ಭಾರತೀಯ ವಿಜ್ಞಾನ ಸಂಸ್ಥೆ, ಬಾಬಾ ಅಟಾಮಿಕ್ ರೀಸರ್ಚ್ ಸೆಂಟರ್, ಇಂದಿರಾ ಗಾಂಧಿ ಸೆಂಟರ್ ಫಾರ್ ಅಟೋಮಿಕ್ ರೀಸರ್ಚ್ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ 250 ಮಂದಿ ವಿಜ್ಞಾನಿಗಳು ಭಾಗವಹಿಸಲಿದ್ದು, ವಿಕಿರಣ ಭೌತಶಾಸ್ತ್ರದ ಕುರಿತು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಸಮಾವೇಶದಲ್ಲಿ ಮಂಡಿಸಲು ಈಗಾಗಲೇ 60 ಪ್ರಬಂಧಗಳು ನೋಂದಣಿಯಾಗಿದ್ದು, ಏ. 6ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆ ವರೆಗೂ ವಿಕಿರಣ ಭೌತಶಾಸ್ತ್ರದ ಕುರಿತು ಸಂಶೋಧನಾ ಪ್ರಬಂಧಗಳು ಮಂಡನೆಯಾಗಲಿದ್ದು, ಇವುಗಳ ಕುರಿತು ಹಿರಿಯ ವಿಜ್ಞಾನಿಗಳು ವಿಮರ್ಶೆ ಮಾಡಲಿದ್ದಾರೆ. ಸಮಾವೇಶದಲ್ಲಿ ಮಂಡನೆಯಾಗುವ ಪ್ರಬಂಧಗಳಲ್ಲಿ ಉತ್ತಮ ಪ್ರಬಂಧಗಳ ಆಯ್ಕೆ ನಡೆಯಲಿದ್ದು, ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿರುವ ಅವರು, ಸಮಾವೇಶದಲ್ಲಿ 750 ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.

**ಸಮಾವೇಶದಲ್ಲಿ ವಿಜ್ಞಾನಿ, ಗಣ್ಯರು:** ಕೋಲಾರ ಜಿಲ್ಲೆಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ನಡೆಯುತ್ತಿರುವ ವಿಕಿರಣ ಭೌತಶಾಸ್ತ್ರದ ರಾಷ್ಟ್ರೀಯ ಸಮಾವೇಶದಲ್ಲಿ ವಿಕಿರಣ ಭೌತಶಾಸ್ತ್ರದಿಂದ ವೈದ್ಯಕೀಯ ಕ್ಷೇತ್ರಕ್ಕಾಗುವ ಪ್ರಯೋಜನ ಮತ್ತಿತರ ಅಂಶಗಳ ಕುರಿತು ಚರ್ಚೆ ನಡೆಯಲಿದೆ. ಈ ಸಮಾವೇಶದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ನಿರ್ದೇಶಕ ಕೆ.ಜೆ. ರಾವ್ ಉದ್ಘಾಟಿಸಲಿದ್ದು, ಬೆಂಗಳೂರು ಉತ್ತರ ವಿವಿ ಉಪಕುಲಪತಿ ಕೆಂಪರಾಜು, ದೇವರಾಜ ಅರಸು ವೈದ್ಯಕೀಯ ವಿವಿ ಉಪಕುಲಪತಿ ಸಿ.ವಿ. ರಘುವೀರ್, ಬೆಂಗಳೂರು ಉತ್ತರ ವಿವಿ ಕುಲಸಚಿವ ಶಂಕರರೆಡ್ಡಿ, ಬೆಂಗಳೂರು ವಿವಿ ಭೌತಶಾಸ್ತ್ರ ಪ್ರಾಧ್ಯಾಪಕ ಡಾ.ಬಿ. ರುದ್ರಸ್ವಾಮಿ, ಕಲ್ಪಕ್ಕಂ ಹಿರಿಯ ವಿಜ್ಞಾನಿಗಳಾದ ಆರ್. ಎಸ್. ಕೇಶವರೆಡ್ಡಿ, ಡಾ.ಬಿ.ಎಸ್. ಶೇಷಾದ್ರಿ, ಉಪಸ್ಥಿತರಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಜಯರಾಮರೆಡ್ಡಿ ವಹಿಸಲಿದ್ದು, ವಿಶೇಷ ಅತಿಥಿಗಳಾಗಿ ಗೋಲ್ಡನ್ ಸಿಟಿ ಕಾಲೇಜಿನ ಕಾರ್ಯದರ್ಶಿ ಎ. ಅಶೋಕ್ ಉಪಸ್ಥಿತರಿರುವರು.

ಬೆಳಗ್ಗೆ 11-15ರಿಂದ 1-15 ಹಾಗೂ ಮಧ್ಯಾಹ್ನ 2 ಗಂಟೆಯಿಂದ 3-30ರ ವರೆಗೂ ನಡೆಯಲಿರುವ ತಾಂತ್ರಿಕ ಅವಧಿಯಲ್ಲಿ ಡಾ.ಬಿ. ರುದ್ರಸ್ವಾಮಿ, ಇಂದಿರಾ ಗಾಂಧಿ ಸೆಂಟರ್ ಫಾರ್ ಅಟೋಮಿಕ್ ರೀಸರ್ಚ್‌ನ ಡಾ.ಆರ್.ಎಸ್. ಕೇಶವಮೂರ್ತಿ, ಮಂಗಳೂರು ವಿವಿಯ ಭೌತಶಾಸ್ತ್ರವಿಭಾಗದಪ್ರಾಧ್ಯಾಪಕಪ್ರೊ.ವೈ. ನಾರಾಯಣ್, ಎಂ.ಎಸ್. ರಾಮಯ್ಯ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಬಿ.ಎಂ. ನಾಗಭೂಷಣ್ ಉಪನ್ಯಾಸ ನೀಡುವರು.

ಕನ್ನಡಪ್ರಭ



# ಕನ್ನಡಿಗರಿಗೆ ವೈದ್ಯ ಪಿಜಿ ನಷ್ಟ

ಮೊದಲ ಪುಟದಿಂದ

10 ವರ್ಷ ಕರ್ನಾಟಕದಲ್ಲಿ ಅಧ್ಯಯನ ಮಾಡಿದವರು ಹಾಗೂ ಕರ್ನಾಟಕ ಮೂಲದ ವಿದ್ಯಾರ್ಥಿಗಳು ಮಾತ್ರ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದಡಿ ಪ್ರವೇಶ ಪಡೆಯಲು ಅರ್ಹರು ಎಂದು ತಿಳಿಸಿ 2018ನೇ ಸಾಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪಿ.ಜಿ. ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಪ್ರಕ್ರಿಯೆಗೆ ಹೊರಡಿಸಲಾದ ಅಧಿಸೂಚನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮಾರ್ಚ್ 10ರಂದು ತನ್ನ ವೆಬ್ ಸೈಟ್‌ನಲ್ಲಿ ಪ್ರಕಟಿಸಿತ್ತು. ಇದನ್ನು ಪ್ರಶ್ನಿಸಿ ಕೃತಿ ಲಖಿಯಾ ಮತ್ತಿತರರು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದ್ದರು.

2014ರಲ್ಲಿ ಇಂತಹದ್ದೇ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು ಆ ತೀರ್ಪು ಈ ಪ್ರಕರಣಕ್ಕೂ ಅನ್ವಯಿಸುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆಯು ಅಸಿಂಧುವಾಗಿದೆ. ಕರ್ನಾಟಕದಲ್ಲಿನ ಕಾಲೇಜುಗಳಲ್ಲಿ ಎಂಬಿಬಿಎಸ್ ಅಥವಾ ಬಿಡಿಎಸ್ ಡಿಗ್ರಿ ಪಡೆದು ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಅಥವಾ ಸರ್ಕಾರೇತರ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಪಿಜಿ ಸೀಟ್ ಪಡೆಯುವುದರಿಂದ ವಿದ್ಯಾರ್ಥಿಗಳನ್ನು ವಂಚಿತರನ್ನಾಗಿಸುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ಕರ್ನಾಟಕದಲ್ಲಿ ಎಂಬಿಬಿಎಸ್, ಬಿಡಿಎಸ್ ಪದವಿ ಪಡೆದು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ 44 ವೈದ್ಯರು ಈ ಅಧಿಸೂಚನೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಅಧಿಸೂಚನೆ ಅಸಾಂವಿಧಾನಿಕವಾಗಿರುವ ಕಾರಣ ಇದನ್ನು ರದ್ದುಗೊಳಿಸಬೇಕು ಎಂಬುದು ಅವರ ವಾದವಾಗಿತ್ತು.

ರಾಜ್ಯದಲ್ಲೇ ಸೇವೆ ಸಲ್ಲಿಸುವ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ಸಿಗುವಂತೆ ಮಾಡುವ ಉದ್ದೇಶ ಸರ್ಕಾರಕ್ಕಿದ್ದು ಇಂತಹ ನಿಯಮ ರೂಪಿಸುವ ಅಧಿಕಾರವಿದೆ ಎಂದು ತನ್ನ ನಿಲುವನ್ನು ಸಮರ್ಥಿಸಿಕೊಂಡಿತ್ತು. ಆದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾವು ದೂರುದಾರ ವಿದ್ಯಾರ್ಥಿಗಳ ವಾದವನ್ನು ಬೆಂಬಲಿಸಿತ್ತು.

## ಕೋಲಾರ ಜಿಲ್ಲೆಯ ಇತಿಹಾಸದಲ್ಲೇ ಪ್ರಥಮ ಬಾರಿಗೆ

# ‘ವಿಕಿರಣ ಭೌತಶಾಸ್ತ್ರ’ ರಾಷ್ಟ್ರೀಯ ಸಮಾವೇಶ

ಕೋಲಾರ ಏ ೫

ನಗರದ ಮಹಿಳಾ ಸರ್ಕಾರಿ ಕಾಲೇಜಿನ ಭೌತಶಾಸ್ತ್ರ ವಿಭಾಗ, ರಾಷ್ಟ್ರೀಯ ವಿಜ್ಞಾನ ಅಕಾಡೆಮಿ, ದೇವರಾಜ ಅರಸು ವೈದ್ಯಕೀಯ ವಿವಿ, ಬೆಂಗಳೂರು ಉತ್ತರ ವಿವಿ ಐಎನ್‌ಎಸ್‌ಎಗಳ ಆಶ್ರಯದಲ್ಲಿ ಟಮಕದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ರಜತ ಮಹೋತ್ಸವ ಸಭಾಂಗಣದಲ್ಲಿ ಜಿಲ್ಲೆಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಏರ್ಪಡಿಸಿರುವ ವಿಕಿರಣ ಭೌತಶಾಸ್ತ್ರ ಕುರಿತು ರಾಷ್ಟ್ರೀಯ ಸಮಾವೇಶವನ್ನು ಇದೇ ೬ರಂದು ಬೆಳಿಗ್ಗೆ ೯ ಘಂಟೆಗೆ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ನಿರ್ದೇಶಕ ಕೆ.ಜೆ.ರಾವ್ ಉದ್ಘಾಟಿಸುವರು.

ಸಮಾವೇಶದ ಸಂಚಾಲಕ ಡಾ|| ಎಚ್.ಸಿ.ಮಂಜುನಾಥ್ ಹಾಗೂ ಸಹ ಸಂಚಾಲಕ ಪ್ರೊ|| ಎಲ್.ಸೀನಪ್ಪ ಅವರು ಕೋಲಾರ ಪತ್ರಿಕೆಗೆ ಈ ಕುರಿತು ಮಾಹಿತಿ ನೀಡಿ ಭಾರತೀಯ ವಿಜ್ಞಾನ ಸಂಸ್ಥೆ, ಬಾಬಾ ಪರಮಾಣು ಸಂಶೋಧನಾ ಕೇಂದ್ರ, ಇಂದಿರಾಗಾಂಧಿ ಪರಮಾಣು ಸಂಶೋಧನಾ ಕೇಂದ್ರ ಮತ್ತಿತರ ಪ್ರತಿಷ್ಠಿತ ಸಂಸ್ಥೆಗಳ ೨೫೦ ವಿಜ್ಞಾನಿಗಳು ಭಾಗವಹಿಸಿ ವಿಕಿರಣ ಭೌತಶಾಸ್ತ್ರದ ಕುರಿತು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಸಮಾವೇಶದಲ್ಲಿ ಮಂಡಿಸಲು ಈಗಾಗಲೇ ೬೦ ಪ್ರಬಂಧಗಳು ನೋಂದಣಿಯಾಗಿದ್ದು ಶುಕ್ರವಾರ ಬೆಳಿಗ್ಗೆ ೯ ರಿಂದ ಸಂಜೆ ೫ ಘಂಟೆಯುವರೆಗೂ ವಿಕಿರಣ ಭೌತಶಾಸ್ತ್ರದ ಕುರಿತು ಸಂಶೋಧನಾ ಪ್ರಬಂಧಗಳು ಮಂಡನೆಯಾಗಲಿದ್ದು, ಇವುಗಳ ಕುರಿತು ಹಿರಿಯ ವಿಜ್ಞಾನಿಗಳು ವಿಮರ್ಶೆ ಮಾಡಲಿದ್ದಾರೆ ಎಂದು ನುಡಿದರು.

ಸಮಾವೇಶದಲ್ಲಿ ೬೫೦ ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶ ನೀಡಿದ ಎಂದ ಅವರು ಸಮಾವೇಶದಲ್ಲಿ ವಿಕಿರಣ ಭೌತಶಾಸ್ತ್ರದಿಂದ ವೈದ್ಯಕೀಯ ಕ್ಷೇತ್ರಕ್ಕಾಗುವ ಪ್ರಯೋಜನ ಮತ್ತಿತರ ಅಂಶಗಳ ಕುರಿತು ಚರ್ಚೆ ನಡೆಯಲಿದ್ದು ಬೆಂಗಳೂರು ಉತ್ತರ ವಿವಿ ಉಪಕುಲಪತಿ ಕೆಂಪರಾಜು, ದೇವರಾಜ ಅರಸು ವೈದ್ಯಕೀಯ ವಿ.ವಿ. ಉಪಕುಲಪತಿ ಸಿ.ವಿ.ರಘುವೀರ್, ಬೆಂಗಳೂರು ಉತ್ತರ ವಿ.ವಿ. ಕುಲಸಚಿವ ಶಂಕರರೆಡ್ಡಿ, ಭೌತಶಾಸ್ತ್ರ ಪ್ರಾಧ್ಯಾಪಕ ಡಾ|| ಬಿ.ರುದ್ರಸ್ವಾಮಿ, ಕಲ್ಪಾಕಂ ಅಣು ವಿದ್ಯುತ್ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಆರ್ ಎಸ್.ಕೇಶವರೆಡ್ಡಿ, ಡಾ|| ಬಿ.ಎಸ್.ಶೇಷಾದ್ರಿ, ಗೋಲ್ಡನ್‌ಸಿಟಿ ಕಾಲೇಜಿನ ಕಾರ್ಯದರ್ಶಿ ಎ. ಅಶೋಕ್ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಜಯರಾಮರೆಡ್ಡಿ ವಹಿಸುವರು ಎಂದು ಮಾಹಿತಿಯಿತ್ತರು.

ಬೆಳಗ್ಗೆ ೧೧-೧೫ ರಿಂದ ೧-೧೫ ಹಾಗೂ ಮಧ್ಯಾಹ್ನ ೨ರಿಂದ ೩-೩೦ರವರೆಗೆ ನಡೆಯುವ ತಾಂತ್ರಿಕ ಅಧಿವೇಶನದಲ್ಲಿ ಡಾ|| ಬಿ.ರುದ್ರಸ್ವಾಮಿ, ಡಾ||ಆರ್.ಎಸ್ ಕೇಶವಮೂರ್ತಿ, ಪ್ರೊ|| ವೈ.ನಾರಾಯಣ್, ಪ್ರೊ|| ಬಿ.ಎಂ.ನಾಗಭೂಷಣ್ ಉಪನ್ಯಾಸ ನೀಡುವರು ಎಂದು ತಿಳಿಸಿದರು.

## ಐವರು ಉಗ್ರರ ಹತ್ಯೆ

ನವದೆಹಲಿ ಏ ೪

ಜಾರ್ಖಂಡ್‌ನ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳ ಜೊತೆ ಬುಧವಾರ ಬೆಳಿಗ್ಗೆ ನಡೆದ ಸತತ ನಾಲ್ಕು ತಾಸುಗಳ ಅವಧಿಯ ಗುಂಡಿನ ಚಕಮಕಿಯಲ್ಲಿ ಐವರು ಮಾವೋವಾದಿ ನಕ್ಸಲೀಯರು ಹತರಾಗಿದ್ದಾರೆಂದು ವರದಿಯಾಗಿದೆ.